ಅವರೆಲ್ಲ ಚೆಲ್ಲಾಪಿಲ್ಲಿಯಾಗಿದ್ದರು. ಕ್ಷಣಮಾತ್ರದಲ್ಲಿ ರಸ್ತೆ ನಿರ್ಜನವಾಗಿತ್ತು. ಆತ ದೊಡ್ಡದಾಗಿ ನಕ್ಕುಬಿಟ್ಟ. ಗುಡ್ಡದ ಮೇಲಿನ ಭೂತದ ಅಟ್ಟಹಾಸ ಕೇಳಿತೆಂಬಂತೆ ಆಚೀಚೆ ಮನೆಯ ಕಿಟಕಿಗಳು ರಪರಪನೆ ಮುಚ್ಚಿಕೊಂಡವು. ಮುಗಿಲು ಮುನಿಸಿಕೊಂಡಂತೆ ಕಾವಳ ಆವರಿಸಿತು.

ಮೆಟ್ಟಿಲ ಕಲ್ಲ ಮೇಲೆಯೆ ಕುಳಿತು ಯೋಚಿಸಿದ. ತಾನು ಮತ್ತೆ ಜೈಲಿಗೇ ಹೋದರೆ ಹೇಗೆ? ಅಲ್ಲಿ ಜೈಲಿನಲ್ಲಿ ಸರಳುಗಳ ಹಿಂಭಾಗದ ಕೋಣೆ ಎಷ್ಟು ಸ್ವಚ್ಛವಿರುತ್ತಿತ್ತು. ಮಾತಾಡಲು, ಪರಸ್ಪರ ಕಷ್ಟ ಸುಖ ಹಂಚಿಕೊಳ್ಳಲು, ಹಾಡಿಗೆ ಸಾಥ್ ಕೊಡಲು ಎಷ್ಟು ಸಹಕೈದಿಗಳು... ಉದ್ಯಾನವನದಲ್ಲಿ ಕೆಲಸ ಮಾಡುವಾಗ ಜೈಲಿನ ಬೃಹತ್ ಗೋಡೆಯೊಳಗೇ ಎಷ್ಟು ಸುಂದರ ಪ್ರಪಂಚವಿತ್ತು... ಗಿಡಗಳು, ಹೂಗಳು, ಹಸಿರೆಲೆಗಳು, ತಂಗಾಳಿ ಸೂಸುವ ಮರಗಳು... ಯಾಕಾಗಬಾರದು? ಹೋಗುವುದು ಬಹಳ ಸುಲಭ. ಆ ಜಾರ, ತನ್ನ ಬದುಕ ಮೂರಾಬಟ್ಟೆ ಮಾಡಿದವನು ಇನ್ನೂ ಬದುಕಿ ಉಳಿದಿದ್ದಾನೆ. ದೊಡ್ಡ ಮನುಷ್ಯನಾಗಿ. ಆವತ್ತು ಗುರಿ ತಪ್ಪಿ ಮೆಟ್ಟಿಲ ಕಲ್ಲ ಮೇಲೆ ಬಿದ್ದ ಕತ್ತಿ ಅಲ್ಲೇ ಇದೆ... ಎಷ್ಟು ಹೊತ್ತಿನ ಕೆಲಸ?

ಅವನಿಗೆ ತನ್ನ ಯೋಚನೆಗೆ ನಗು ಬಂತು.

ಅಥವಾ ಈ ಮನೆಯಲ್ಲಿಯೇ ತಾನು ಉಳಿದರಾಯಿತು. ತಾನಿದ್ದೇನೆ ಅಂತಾದರೆ ಯಾರೂ ಬರುವ ಧೈರ್ಯ ಮಾಡಲಿಕ್ಕಿಲ್ಲ. ಊರಲ್ಲಿ ಒಂದು ಸುತ್ತು ಬಂದರೆ ತನ್ನ ಹೊಟ್ಟೆ ಪಾಡಿಗೆ ದವಸ ಧಾನ್ಯಗಳು ಮನೆಗೇ ಬಂದು ಬಿದ್ದಾವೇನೋ. ಅಜ್ಜಿ ಹೇಳುತ್ತಿದ್ದ ಗುಹೆಯೊಳಗಿನ ಒಕ್ಕಣ್ಣ ರಾಕ್ಷಸನ ಕತೆ ನೆನಪಿಗೆ ಬಂದು ಅವನಿಗೆ ತನ್ನ ಯೋಚನೆಗೆ ನಗು ಬಂತು.

ಅದೇನೂ ಬೇಡ. ಈ ಜಗತ್ತಿನಲ್ಲಿ ಅಜ್ಞಾತನಾಗಿ, ಅನಾಮಿಕನಾಗಿ ಉಳಿಯಬೇಕು ಇಲ್ಲವೆ ಈ ಎಲ್ಲ ಹಳವಂಡಗಳನ್ನ ಕಳೆದು ಹುಟ್ಟಿನಿಂದ ಹೊಸಬನಾಗಿ ಚಿಗುರಿ ಬೆಳೆಯಬೇಕು. ನಿಜ, ಆ ಪ್ರತಿಭೆ ತನ್ನಲ್ಲಿದೆ. ಅಂತಿಮ ಹಂತದಲ್ಲಿದ್ದಾಗ ಓರ್ವ ನಿರ್ಣಾಯಕರು ಹೇಳಿದ ಮಾತು ನೆನಪಾಯಿತು. 'ಬಹುಮಾನ ಬರುತ್ತದೆಯೊ ಇಲ್ಲವೊ ಬೇರೆ ಮಾತು. ಆದರೆ, ನೀವು ಪ್ರಯತ್ನಿಸುತ್ತೀರಾದರೆ ಇಂಡಸ್ಟ್ರೀಯಲ್ಲಿ ಎತ್ತರಕ್ಕೆ, ಬಹಳ ಎತ್ತರಕ್ಕೆ ಏರಬಲ್ಲಿರಿ. ಇದೊಂದು ಚಿಮ್ಮು ಹಲಗೆಯಷ್ಟೆ. ಹಾರುತ್ತೀರೋ ಬೀಳುತ್ತೀರೊ ನಿಮಗೆ ಬಿಟ್ಟದ್ದು.' ಕಳೆದುಕೊಂಡದ್ದನ್ನ ಹುಡುಕುತ್ತ ಕೂರಬಾರದು. ಹೊಸದನ್ನ ಹುಡುಕಬೇಕು. ಅದಕ್ಕೆ ಎಲ್ಲವನ್ನ ತನ್ನೊಳಗಿಟ್ಟುಕೊಂಡೂ ಪ್ರತ್ಯೇಕತೆಯನ್ನು ಕೊಡುವ ಪಟ್ಟಣಕ್ಕೇ ಮರಳಿ ಹೋಗಬೇಕು. ಹೌದು, ಹೋಗುವುದೆ ಸೂಕ್ತ ಎನ್ನಿಸಿದ್ದೆ ಕಿಸೆ ಮುಟ್ಟಿ ನೋಡಿಕೊಂಡ – ಬಸ್‌ಚಾರ್ಜಿಗೆ ಹಣ ಇದೆಯಾ ಎಂದು. ಇತ್ತು. ಮಧ್ಯಾಹ್ನದ ಊಟವನ್ನು ಕಾಮತರಲ್ಲಿಯೆ ಮಾಡಿದರಾಯಿತು. ಸಾಕಾಗುತ್ತೆ...

ಈಗ ಅವನಿಗೆ ತನ್ನ ಯೋಚನೆಗೆ ನಗು ಬರಲಿಲ್ಲ.

## ಟಿ.ಎಂ. ರಮೇಶ

ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ವ್ಯವಸ್ಥಾಪಕರಾಗಿ ನಿವೃತ್ತರು. ಸಿದ್ದಾಪುರ(ಉ.ಕ.)ದಲ್ಲಿ ನೆಲೆಸಿದ್ದಾರೆ. ಪ್ರಕಟಿತ ಕಥಾಸಂಕಲನಗಳು: 'ಇಂಡಾ', 'ದೃಷ್ಟಿ ಹರಿದಷ್ಟೆ ದೂರ', 'ಕಿಚ್ಚು ಮತ್ತಿತರ ಕತೆಗಳು', 'ಗೋಡೆಕಿಂಡಿ' 'ದಶಕದ ಕತೆಗಳು'. ಕಿರುಕಾದಂಬರಿಗಳು: 'ಭೂತ', 'ಯುಗ್ಮ'. ಕವನ ಸಂಕಲನ: 'ಹುತ್ತಗಟ್ಟಿದೆ ಕವಿತೆ'. ತಾಳಮದ್ದಲೆಯ ಅರ್ಥದಾರಿ.